









# ಕಲೆಯ ಸಕ್ಕರೆ ಕೊಳ್ಳಿರೋ

'ದಿ ಕಲೆಕ್ಷನ್', 'ಸಬ್‌ಲೈಮ್ ಗ್ಯಾಲರಿಯಾ' ಮತ್ತು 'ಆರ್ಟ್ ಚಟ್ನಿ' ಸಂಸ್ಥೆಗಳ ಸಹಭಾಗಿತ್ವದಲ್ಲಿ 'ಆರ್ಟ್ ಬೆಂಗಳೂರು 2011' ಎಂಬ ಕಲಾಕೃತಿ ಪ್ರದರ್ಶನ ನಡೆಯುತ್ತಿದೆ. ಕಳೆದ ವರ್ಷದ ಯಶಸ್ಸನ್ನು ಈ ವರ್ಷಕ್ಕೂ ವಿಸ್ತರಿಸುವ ಈ ಸಂಘಟನೆಗಳ ಪ್ರಯತ್ನ ಮುಂದುವರಿದಿದೆ. ದಕ್ಷಿಣ ಭಾರತದ ಸಮಕಾಲೀನ ಕಲಾ ಪ್ರದರ್ಶನದಲ್ಲಿ ಮೇಲ್ದರ್ಜೆ ಕಾಯ್ದುಕೊಂಡಿರುವ ಆರ್ಟ್ ಬೆಂಗಳೂರು ಭಾರತೀಯ ಕಲೆಯಲ್ಲಿ ಉತ್ಕೃಷ್ಟ ಮಟ್ಟದ ಕಲಾಕೃತಿಗಳನ್ನು ಪ್ರದರ್ಶಿಸುತ್ತಾ ಬಂದಿದೆ. ಈ ಪ್ರದರ್ಶನದಿಂದ ಬರುವ ಹಣವನ್ನು ಅಸಹಾಯಕ ಕ್ಯಾನ್ಸರ್ ಪೀಡಿತರಿಗೆ ಉಚಿತ ಚಿಕಿತ್ಸೆ ನೀಡುವ ಉದ್ದೇಶ ಹೊಂದಿರುವ ಎಚ್‌ಸಿಜಿ ಫೌಂಡೇಷನ್‌ಗೆ ನೀಡಲಾಗುತ್ತದೆ.

ಮುರಳಿ ಚೀರೋತ್, ರೇಣು ಜಾರ್ಜ್, ರಾಜ್ ಬಗಾರಿಯಾ, ಯೂಸುಫ್ ಅರಕ್ಕಲ್ ಮುಂತಾದ ಖ್ಯಾತನಾಮರ ಕಲಾಕೃತಿಗಳು ಈ ಪ್ರದರ್ಶನದಲ್ಲಿ ಕಾಣಿಸಿಕೊಳ್ಳುತ್ತಿವೆ.

ಆರ್ಟ್ ಬೆಂಗಳೂರಿನ ಎರಡನೇ ಆವೃತ್ತಿ ನಡೆಸುತ್ತಿರುವುದು ಸಂತೋಷದ ವಿಷಯ, ಬೆಂಗಳೂರಿನಲ್ಲಿ ಪೂರ್ಣಪ್ರಮಾಣದ ಲಲಿತ ಕಲಾ ಉತ್ಸವಗಳು ನಡೆಯುವುದು ಕಡಿಮೆ. ಕಳೆದ ವರ್ಷಕ್ಕಿಂತ ಈ ವರ್ಷದ ಆರ್ಟ್ ಬೆಂಗಳೂರು ವೈವಿಧ್ಯತೆಯಿಂದ ಕೂಡಿರುತ್ತದೆ ಎನ್ನುತ್ತಾರೆ, ಸಬ್‌ಲೈಮ್ ಗ್ಯಾಲರಿಯಾದ ಉಜ್ಮಾ ಇರ್ಫಾನ್.

ಕ್ಯಾನ್ಸರ್ ಮಾರಕ ರೋಗ. ಹಾಗಾಗಿ ಇರುವವರು ಇಲ್ಲದವರಿಗೆ ಸಹಾಯ ಮಾಡಲು ಇದೊಂದು ಅವಕಾಶ. ದಕ್ಷಿಣ ಏಷ್ಯಾದ ಅತಿ ದೊಡ್ಡ ಕ್ಯಾನ್ಸರ್ ಕೇರ್ ಆಗಿರುವ ಎಚ್‌ಸಿಜಿ ಈ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಹಣ ಇಲ್ಲ ಎಂಬ ಕಾರಣಕ್ಕಾಗಿ ಯಾರಿಗೂ ಕ್ಯಾನ್ಸರ್ ಚಿಕಿತ್ಸೆಯನ್ನು ನಿರಾಕರಿಸುವುದಿಲ್ಲ ಎನ್ನುವ ಎಚ್‌ಸಿಜಿ ಫೌಂಡೇಷನ್‌ನ ಟ್ರಸ್ಟಿ ಡಾ. ಬಿ.ಎಸ್. ಅಜಯ್‌ಕುಮಾರ್ ಆರ್ಟ್ ಬೆಂಗಳೂರಿನ ಸಹಾಯವನ್ನು ನೆನೆಯುತ್ತಾರೆ.

ಜೂನ್ 17ರಂದು ಆರಂಭವಾಗಲಿರುವ ಆರ್ಟ್ ಬೆಂಗಳೂರು ಜೂನ್ 25ರವರೆಗೆ ಪ್ರದರ್ಶನ ಕಾಣಲಿದೆ. ಈ ಪ್ರದರ್ಶನದಲ್ಲಿ ಮಕ್ಕಳ ಸ್ಪರ್ಧೆಗಳು, ಕಾರ್ಯಾಗಾರಗಳು, ಸಂವಾದಗಳು, ಸಿನಿಮಾ ಪ್ರದರ್ಶನ ಮತ್ತು ಗಣ್ಯರ ಸಮ್ಮುಖದಲ್ಲಿ ನಡೆಯಲಿರುವ ಹರಾಜು ಪ್ರಕ್ರಿಯೆಗಳೂ ಸೇರಿವೆ. ರಾಷ್ಟ್ರದಾದ್ಯಂತ ಇರುವ ಅನೇಕ ಕಲಾ ಸಂಸ್ಥೆಗಳು ಇದರಲ್ಲಿ ಭಾಗಿಯಾಗಲಿವೆ.

**ಆರ್ಟ್ ಬೆಂಗಳೂರು ಉತ್ಸವ ನಡೆಯಲಿರುವ ಸ್ಥಳ:**
ದಿ ಕಲೆಕ್ಷನ್, ಯುಬಿ ಸಿಟಿ, ಬೆಂಗಳೂರು


ಡಾ. ಬಿ.ಎಸ್. ಅಜಯ್‌ಕುಮಾರ್


ಉಜ್ಮಾ ಇರ್ಫಾನ್







ಮುರಳಿ ಚೀರೋತ್, ರೇಣು ಜಾರ್ಜ್, ರಾಜ್ ಬಗಾರಿಯಾ, ಯೂಸುಫ್ ಅರಕ್ಕಲ್ ಮುಂತಾದ ಖ್ಯಾತನಾಮರ ಕಲಾಕೃತಿಗಳು ಈ ಪ್ರದರ್ಶನದಲ್ಲಿ ಕಾಣಿಸಿಕೊಳ್ಳುತ್ತಿವೆ.

